– 'ಸಂನ್ಯಾಸಿ ಹಾಗು ಗೃಹಸ್ಥನಿಗಿರುವ ವ್ಯತ್ಯಾಸ ಮೇರು ಪರ್ವತ ಮತ್ತು ಸಾಸಿವೆ ಕಾಳು, ಪ್ರಚಂಡ ಸೂರ್ಯ ಮತ್ತು ಮಿಣುಕು ಹುಳ, ಅನಂತ ಸಮುದ್ರ ಹಾಗು ಗೋಷ್ಪದ ವಾರಿಗಳ ನಡುವಿನ ವ್ಯತ್ಯಾಸದಂತೆ' ಎನ್ನುತ್ತ ಅವರು ನಮ್ಮ ಸಾಧುಗಳು ಹಾಗು ಗೃಹಸ್ಥರ ನಡುವಿನ ಆದರ್ಶಗಳನ್ನು ತೋರಿಸುತ್ತಿದ್ದರು.

ಶ್ರೀ 'ಮ' ಏಸುಕ್ರಿಸ್ತನ ಬಗ್ಗೆ ಆಗಾಗ ಹೇಳುತ್ತಿದ್ದರು. ''ಕೃಷ್ಣನು ಗೋಪಾಲಕನಾದರೆ ಕ್ರಿಸ್ತನು ಕುರುಬ. ಒಂದು ದಿನ ಕುರಿಯೊಂದು ಕಳೆದು ಹೋಯಿತು. ಬಹಳ ಕಾಲ ಹುಡುಕಿ ಸಿಕ್ಕಿದ ಕುರಿಮರಿಯನ್ನು ಕ್ರಿಸ್ತನು ಪ್ರೀತಿಯಿಂದ ಎತ್ತಿಕೊಂಡು ಬರುತ್ತಿದ್ದಾಗ ಉಳಿದ ಕುರಿಗಳು ಅವನನ್ನು ಹಿಂಬಾಲಿಸತೊಡಗಿದವು. ಆಗ ಏಸುಕ್ರಿಸ್ತನು ಹೇಳಿದನು, 'ನೋಡಿ, ಕುರಿಗಳಿಗೆ ಪರಸ್ಪರ ಅದೆಷ್ಟು ಪ್ರೀತಿ! ಈ ಕುರಿಮರಿಯು ತಪ್ಪಿಸಿಕೊಂಡು ಹೋಗಿತ್ತು. ಭಗವಂತನನ್ನು ಅವಲಂಬಿಸಿದವರನ್ನು ಅವನು ದಾರಿತಪ್ಪದಂತೆ ಕಾಪಾಡುತ್ತಾನೆ. 'A good shepherd goes to search for a sheep gone astray.' ಆದ್ದರಿಂದ ಭಗವಂತನ ಮೇಲೆ ನಿರ್ಭರರಾಗಿರಿ, ಆಗ ನಿಮಗೆ ಯಾವ ಭಯವೂ ಇರುವುದಿಲ್ಲ.''

ನಿಮ್ಮ ಜನ್ಮಸಿದ್ಧ ಹಕ್ಕನ್ನು ಮಾರಬೇಡಿ. ನಿಮ್ಮ ಜನ್ಮಸಿದ್ಧ ಹಕ್ಕನ್ನು ಸದಾ ರಕ್ಷಿಸಿಕೊಳ್ಳಿ. ಈ ಸಂಬಂಧವಾಗಿ ಏಸುವಿನ ಒಂದು ದೃಷ್ಟಾಂತ ಕಥೆಯನ್ನು ಶ್ರೀ 'ಮ' ಹೇಳಿದ್ದರು. ''ಧನಿಕನೊಬ್ಬನ ಇಬ್ಬರು ಮಕ್ಕಳು ವ್ಯಾಪಾರಕ್ಕಾಗಿ ವಿದೇಶಕ್ಕೆ ಹೋದರು. ಮರಳುಗಾಡಿನ ಪಥದಲ್ಲಿ ಸಾಗುತ್ತಿದ್ದಂತೆ ಕಿರಿಯವನ ನೀರು ಆಹಾರ ವಸ್ತುಗಳು ಮುಗಿದು ಹೋದವು. ಅವನು ತನ್ನ ಅಣ್ಣನಿಗೆ, 'ನನಗೆ ನೀರು, ಆಹಾರವನ್ನು ಕೊಡು' ಎಂದಾಗ ಅಣ್ಣನು, 'ನೀರು ಮತ್ತು ಆಹಾರವನ್ನು ನಾನು ನಿನಗೆ ಕೊಡುತ್ತೇನೆ, ಬದಲಾಗಿ ನೀನು ನಿನ್ನ ಜನ್ಮಸಿದ್ಧ ಹಕ್ಕು ಅರ್ಥಾತ್ ಸಂಪತ್ತಿನ ಅರ್ಧಾಂಶವನ್ನು ನನಗೆ ಕೊಡಬೇಕು' ಎಂದ. ಅವರು ಬಹಳ ಶ್ರೀಮಂತರು.''

ಶ್ರೀ 'ಮ' ನಮ್ಮನ್ನು ಕೇಳಿದರು, ''ಹಾಗಾದರೆ ತಮ್ಮನು ತನ್ನ ಜನ್ಮಸಿದ್ಧ ಹಕ್ಕನ್ನು ಕೊಟ್ಟುಬಿಡುವುದೆ?'' ನಾವೆಂದೆವು, ''ಜನ್ಮಸಿದ್ಧ ಹಕ್ಕನ್ನು ಕೊಡದಿದ್ದರೆ ಅವನು ಹಸಿವೆಯಿಂದ ಸಾಯುವನು.'' ಶ್ರೀ 'ಮ' ವಿವರಿಸಿದರು, ''ಹಾಗಾದರೆ ತಮ್ಮನು ಚಿರಕಾಲವೂ ಅಣ್ಣನ ದಾಸನಾಗಿ ಬಾಳಬೇಕಾಗುವುದು. ಇಲ್ಲ. ಜನ್ಮಸಿದ್ಧ ಹಕ್ಕನ್ನು ಕೊಡುವುದಕ್ಕಿಂತ ಮರಣವೇ ಲೇಸು. ಭಗವಂತ ನೀಡಿರುವ ಜನ್ಮಸಿದ್ಧ ಹಕ್ಕು ನಮಗೂ ಇದೆ. ನಾವು ಆತ್ಮಸ್ವರೂಪರು, ಅವಿನಾಶಿಗಳು. ನಾವು ಆತ್ಮಜ್ಞಾನವನ್ನು ಪಡೆಯಬೇಕು. ನೋಡಿ, ಇದಕ್ಕೆ ಬೇಕಾದುದು ವಿವೇಕ-ವೈರಾಗ್ಯ. ಆಹಾರ, ಉಡುಗೆ-ತೊಡುಗೆಗಳಲ್ಲಿ ಮನಸ್ಸನ್ನಿರಿಸಿ ಅವುಗಳನ್ನು ಮರೆಯಬಾರದು. ನಮ್ಮ ಜೀವನವನ್ನೇ ಒತ್ತೆಯಿಟ್ಟರೂ ಸರಿಯೆ, ಆತ್ಮಜ್ಞಾನದ ಹಕ್ಕಿಗಾಗಿ ಭಗವಂತನಲ್ಲಿ ಪ್ರಾರ್ಥಿಸಬೇಕು.''

''ಯೇಸುಕ್ರಿಸ್ತನು ಮತ್ತೊಂದು ದೃಷ್ಟಾಂತ ಕಥೆಯನ್ನೂ ಹೇಳುತ್ತಿದ್ದ ಕೇಳಿ : ಒಬ್ಬ ವ್ಯಾಪಾರಿಯಿದ್ದ. ಅವನು ತನ್ನ ಸಾಮಾನುಗಳನ್ನು ಮಾರಿ ಕೋಟ್ಯಂತರ ಬೆಲೆಬಾಳುವ ಒಂದು ಮುತ್ತನ್ನು ಕೊಂಡುಕೊಂಡನು. ಬೇಕಾದರೆ ಅದನ್ನು ಮಾರಿ ಬಂದ ಹಣದಿಂದ ತನ್ನ ವ್ಯಾಪಾರವನ್ನು ವೃದ್ಧಿಗೊಳಿಸಬಹುದಾಗಿತ್ತು. ಆ ಮುತ್ತು ಯಾವುದೆಂದು ಹೇಳಿ, ನೋಡೋಣ. ಅದೇ ಭಕ್ತಿ. ನೋಡಿ, ತ್ಯಾಗವಿಲ್ಲದೆ ಭಕ್ತಿ ಉಂಟಾಗದು. ಅದೇ ರೀತಿ ಸಂಪೂರ್ಣ ಮನಸ್ಸನ್ನು ಭಗವಂತನಿಗೆ ಅರ್ಪಿಸಿದರೆ ಮಾತ್ರ ಭಗವಂತನನ್ನು ಪಡೆಯಲು ಸಾಧ್ಯ.'' ಹೀಗೆ ಅವರು ವಿಭಿನ್ನ ಕಥೆಗಳ ಮೂಲಕ ನಮಗೆ ಶಿಕ್ಷಣವನ್ನು ನೀಡುತ್ತಿದ್ದರು.

ನಾನು 'ಉದ್ಬೋಧನ'ದಲ್ಲಿದ್ದಾಗ ಒಮ್ಮೊಮ್ಮೆ ಬೇಲೂರು ಮಠದಲ್ಲಿ ಮಹಾಪುರುಷ ಮಹಾರಾಜರನ್ನು ಕಾಣಲು ಹೋಗುತ್ತಿದ್ದೆ. ಶ್ರೀ 'ಮ' ನನಗೆ ಹೇಳಿದ್ದರು, ''ಆಧ್ಯಾತ್ಮಿಕ ಪಥದಲ್ಲಿ ಅಗತ್ಯವಾಗಿ ಬೇಕಾದುದೆಂದರೆ ವಿಶ್ವಾಸ ಹಾಗೂ ಗುರುಸೇವೆ. ಗುರುಗಳ ಆದೇಶದಂತೆ ನಡೆ. ನಿನ್ನ ಭಾವ-ಭಕ್ತಿ ಹಾಗೂ ಯಾವ ಪಥದಲ್ಲಿ ನಡೆದರೆ ನಿನಗೆ ಒಳ್ಳೆಯದೆಂಬುದು ಗುರುಗಳಿಗೆ ಹೆಚ್ಚಾಗಿ ತಿಳಿದಿರುತ್ತದೆ.'' ೧೯೨೫ರಲ್ಲಿ ನಾನು ಮಹಾಪುರುಷಜಿಯವರಿಂದ ಮಂತ್ರದೀಕ್ಷೆ ಪಡೆದೆ. ಅನಂತರ ೧೯೨೮ರಲ್ಲಿ ಬ್ರಹ್ಮಚರ್ಯ ದೀಕ್ಷೆಯನ್ನೂ ೧೯೩೩ರಲ್ಲಿ ಸಂನ್ಯಾಸವನ್ನೂ ಪಡೆದೆ. ಭಗವಂತನನ್ನು ನನ್ನವನನ್ನಾಗಿಸಿಕೊಳ್ಳುವುದೇ ದೀಕ್ಷೆಯ ಮೂಲ ಉದ್ದೇಶವೆಂದು ದೀಕ್ಷೆಯ ನಂತರ ತಿಳಿಯಿತು. ಭಗವಂತ ಮತ್ತು ಭಕ್ತನ ನಡುವೆ ಯಾವ ಭೇದವೂ ಇಲ್ಲ - ಇದೊಂದು ಚಿರಕಾಲ ಸಂಬಂಧ. ಆತನು ಅಂತರ್ಯಾಮಿ. ನಮ್ಮ ಅಂತರಂಗ-ಬಾಹ್ಯ, ಸರ್ವವೂ ಆತನಿಗೆ ತಿಳಿದಿದೆ. ಶ್ರೀ 'ಮ' ಹೇಳುತ್ತಿದ್ದರು- ''ಗುರು ಹಾಗೂ ಇಷ್ಟದೇವತೆಯೇ ಆಧ್ಯಾತ್ಮಿಕ ಜೀವನದ ಪ್ರಧಾನ ಆಧಾರ. ಸಾವಿರ ಗಂಟುಗಳಿರುವ ಹಗ್ಗವನ್ನು ಮಂತ್ರದ ಮೂಲಕ ಬಿಡಿಸಿಕೊಡುವ ಸಾಮರ್ಥ್ಯವಿರುವುದೆಂದರೆ ಗುರುವಿಗೆ ಮಾತ್ರವೇ.''

ಶ್ರೀ 'ಮ' ಅವರನ್ನು ವಾಸ್ತವವಾಗಿ 'ಋಷಿ'ಗಳೆಂದೇ ಹೇಳಬಹುದು. ಮರ್ಟನ್ ಇನಸ್ಟಿಟ್ಯೂಷನ್‌ನ ಛಾವಣಿಯನ್ನು ಟಬ್‌ಗಳಲ್ಲಿನ ಹೂ-ಗಿಡ-ಬಳ್ಳಿಗಳಿಂದ ಕುಂಜವನ್ನಾಗಿ ಮಾರ್ಪಡಿಸಿದ್ದರು. ಅಸೀಮ ನೀಲಾಕಾಶದ ಹೊರತು ಮತ್ತೇನೂ ಗೋಚರಿಸದ ಆ ಛಾವಣಿಯಲ್ಲಿ ಅವರು ಆಶ್ರಮವನ್ನು ಸೃಷ್ಟಿಸಿ ಋಷಿಯಂತೆ ಇದ್ದರು.

ಸಾಯಂಕಾಲವಾಗುತ್ತಲೆ ಶ್ರೀ 'ಮ' ಮೈಮೇಲಿನ ರೋಮಗಳನ್ನು ಚೆಕ್ ಮಾಡುತ್ತಿದ್ದರು. ''ನೋಡಿ ಈಗ ಸಾಧನೆ- ಭಜನೆಗಳ ಸಮಯ. 'ಅನ್ಯಾ ವಾಚೋ ವಿಮುಂಚಥಾಮೃತಸ್ಯೈಷ ಸೇತುಃ' - ಈಗ ಇತರ ಮಾತುಕತೆಗಳನ್ನು ಬಿಟ್ಟು, ಆತ್ಮವನ್ನು ತಿಳಿ - ಮೋಕ್ಷಪ್ರಾಪ್ತಿಗೆ ಇದೇ ಉಪಾಯ. ಠಾಕೂರರ ಬಳಿ ಯಾವ ಗಡಿಯಾರವೂ ಇರಲಿಲ್ಲ. ಅವರು ತಮ್ಮ ಮೈಯ ರೋಮ

ಗಳನ್ನು ಚೆಕ್ ಮಾಡಿ ಸಂಜೆಯಾಯಿತೋ ಇಲ್ಲವೋ ಎಂಬು ದನ್ನು ತಿಳಿಯುತ್ತಿದ್ದರು.

ಠಾಕೂರರ ಇತರ ಶಿಷ್ಯರ ದರ್ಶನವನ್ನು ನಾನು ಪಡೆದಿದ್ದೇನೆ. ನಾನೊಮ್ಮೆ ಸ್ವಾಮಿ ಅಭೇದಾನಂದರನ್ನು ನೋಡಲು ಹೋಗಿದ್ದೆ. ಅವರು ಆಗ ಧ್ಯಾನ ಮುಗಿಸಿ ವಾಕಿಂಗ್ ಮಾಡುತ್ತಿದ್ದರು. ನಾನು ಅವರಿಗೆ ಪ್ರಣಾಮ ಸಲ್ಲಿಸಿ ಆಶೀರ್ವಾದವನ್ನು ಕೋರಿದೆ. ''ಮಹಾರಾಜ್, ನಾನು ಪುರಿಗೆ ಹೋಗುತ್ತಿದ್ದೇನೆ. ಭಕ್ತಿಯುಂಟಾಗಲೆಂದು ನನ್ನನ್ನು ಆಶೀರ್ವದಿಸಿ'' ಎಂದೆ.

ಅಭೇದಾನಂದಜಿ ಹೇಳಿದರು, ''ನೋಡು ಹೆಚ್ಚು ತಿರುಗಾಡಿದರೆ ಭಕ್ತಿಯುಂಟಾಗದು. ಒಂದೇ ಸ್ಥಳದಲ್ಲಿ ಸ್ಥಿರವಾಗಿ ಕುಳಿತು ಜಪ-ಧ್ಯಾನಗಳನ್ನು ಮಾಡುತ್ತ ಠಾಕೂರರನ್ನು ಪ್ರಾರ್ಥಿಸು.''

ಮತ್ತೊಂದು ಸಲ ಸಾರಗಾಛಿಯಲ್ಲಿ ಅಖಂಡಾನಂದರನ್ನು ಭೇಟಿಯಾಗಲು ಹೋಗಿದ್ದೆ. ಅಲ್ಲಿ ನನಗೆ ತುಂಬ ಜ್ವರ ಬಂತು. ಸ್ವಲ್ಪ ದಿನಗಳ ನಂತರ ಜ್ವರ ಬಿಟ್ಟಾಗ ಅಖಂಡಾನಂದ ಮಹಾರಾಜರು ಹೇಳಿದರು :

**ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ ।**
**ಆಗಮಾಪಾಯಿನೋಽನಿತ್ಯಾಂಸ್ತಾಂಸ್ತಿತಿಕ್ಷಸ್ವ ಭಾರತ ॥**

*(ಗೀತೆ, ೨.೧೪)*

'ಹೇ ಕೌಂತೇಯ, ಇಂದ್ರಿಯಗಳೊಡನೆ ವಿಷಯಗಳ ಸಂಯೋಗದಿಂದಾಗಿ ಶೀತ-ಉಷ್ಣ, ಸುಖ-ದುಃಖಗಳು ಅನುಭವಕ್ಕೆ ಬರುತ್ತವೆ. ಇವೆಲ್ಲ ಬರುತ್ತವೆ, ಹೋಗುತ್ತವೆ - ಅನಿತ್ಯ. ಆದ್ದರಿಂದ ಇವುಗಳನ್ನು ಸಹಿಸಿಕೊ.'

''ನೋಡು, 'ಸಹಿಸಿಕೊ' ಎಂದು ಭಗವಂತನು ಹೇಳುತ್ತಾನೆ. ಯಾವುದೇ ವ್ಯಾಧಿಯನ್ನು ಶರೀರದ ಅತಿಥಿ ಎಂದು ತಿಳಿ. ಅತಿಥಿಗಳು ಮನೆಗೆ ಬರುತ್ತಾರೆ, ಹೊರಟು ಹೋಗುತ್ತಾರೆ. ಅವರು ಚಿರಕಾಲವೂ ಇರುವವರಲ್ಲ. ಮನಸ್ಸನ್ನು ನಿಗ್ರಹಿಸು. ವ್ಯಾಧಿಗಳನ್ನು ಅತಿಥಿ ಎಂದು ಬಗೆದರೆ ಹೆಚ್ಚು ಕಷ್ಟವೆನಿಸುವುದಿಲ್ಲ.''

ಕಲ್ಕತ್ತದಲ್ಲಿ ವಿದ್ಯಾರ್ಥಿಯಾಗಿದ್ದಾಗ ನನ್ನ ಸ್ನೇಹಿತನಾದ ಸುರೇಂದ್ರನೊಡನೆ ಠಾಕೂರರ ಗೃಹಸ್ಥ ಭಕ್ತರಾಗಿದ್ದ ಸೋದರ ಭೂಪತಿಯವರ ಬಳಿಗೆ ಹೋಗಿದ್ದೆ. ಗೃಹಸ್ಥರಾಗಿದ್ದರೂ ಅವರು ದಿವ್ಯಭಾವದಲ್ಲಿರುತ್ತಿದ್ದರು. ಎರಡು ಕೈಗಳನ್ನೂ ಮೇಲೆತ್ತಿ ಎಲ್ಲರಿಗೂ ಆಶೀರ್ವಾದ ಮಾಡುತ್ತಿದ್ದರು. ಒಮ್ಮೊಮ್ಮೆ ಅವರು ಎಂಟು-ಹತ್ತು ಗಂಟೆಗಳ ಕಾಲ 'ಹರಿ-ಹರಿ' ಎಂದು ಹರಿನಾಮದಲ್ಲಿ ಕಳೆಯುತ್ತಿದ್ದರು. ಅವರಿಗೆ ಕೆಲವರು ಶಿಷ್ಯರಿದ್ದರು. ನಾನು ಪರೀಕ್ಷೆ ಮುಗಿಸಿ, ಸೋದರ ಭೂಪತಿ ನನ್ನ ಮನಸ್ಸಿನಲ್ಲೇನಿದೆಯೆಂದು ಬಲ್ಲರೆ ಎಂದು ಪರೀಕ್ಷೆ ಮಾಡಲೆಂದು ಅವರ ಬಳಿ ಹೋದೆ. ಅವರೇನಾದರೂ, 'ಹ್ಞುಂ, ಗೆಲುವು ಆಗುವುದು' ಎಂದರೆ ಆಗ ತಿಳಿದುಕೊಳ್ಳುವೆ ಎಂದುಕೊಂಡೆ. ಭೂಪತಿ ಹಠಾತ್ತನೆ 'ಹ್ಞುಂ, ಗೆಲುವು ಆಗುತ್ತದೆ' ಎಂದರು. ಈ ಘಟನೆಯಿಂದ ನನಗೆ ಭಗವಂತನಲ್ಲಿ ವಿಶ್ವಾಸವುಂಟಾಯಿತು.

ಸ್ವಾಮಿ ಕೈಲಾಸಾನಂದರು ಹೇಳಿದ್ದರು, ಒಮ್ಮೆ ಅವರು ಸೋದರ ಭೂಪತಿಯನ್ನು, ''ಠಾಕೂರರು ಯಾವಾಗ ಸಂತೋಷಪಡುತ್ತಿದ್ದರು?'' ಎಂದು ಕೇಳಿದಾಗ ಅವರು ''ಯಾರಾದರೂ ಕಾಮಿನಿ-ಕಾಂಚನವನ್ನು ತ್ಯಾಗ ಮಾಡಿದರೆ ಠಾಕೂರರಿಗೆ ತುಂಬ ಖುಷಿಯಾಗುತ್ತಿತ್ತು'' ಎಂದರು. *(ಸಮಾಪ್ತಿ)*

## ಶ್ರೀಮಾತೆಯವರ ಉಪದೇಶಗಳು



* ಶರಣಾಗತಿಯನ್ನು ಹೊಂದಿ ಇರಬೇಕು. ಆಗ ಮಾತ್ರ ಭಗವಂತನ ಕೃಪೆ ಉಂಟಾಗುವುದು.

* **ಭಕ್ತೆ :** ಹೇಗೆ ಜಪ ಮಾಡಲಿ?

**ಶ್ರೀಮಾತೆ :** ಯಾವ ಭಾವದಿಂದ ಜಪ ಮಾಡುತ್ತೀಯೋ ಆ ಭಾವವೇ ಮನಸ್ಸನ್ನು ತುಂಬುವುದು. ಶ್ರೀರಾಮಕೃಷ್ಣರು ನಿನ್ನವರು ಎಂದೇ ಯಾವಾಗಲೂ ಭಾವಿಸು.

* ಮನುಷ್ಯ ತಪ್ಪು ಮಾಡಿಯೆ ಮಾಡುತ್ತಾನೆ. ಅದನ್ನು ನೋಡಬಾರದು. ಹಾಗೆ ನೋಡುವುದರಿಂದ ತನಗೇ ತೊಂದರೆಯಾಗುವುದು. ಇತರರ ತಪ್ಪನ್ನು ನೋಡುತ್ತ ಕೊನೆಗೆ ತಪ್ಪು ನೋಡುವುದೇ ಸ್ವಭಾವವಾಗಿಬಿಡುವುದು.

* ಜನರನ್ನು ಪ್ರೀತಿಸಿದರೆ ದುಃಖವನ್ನು ಅನುಭವಿಸಲೇಬೇಕಾಗುವುದು. ಭಗವಂತನನ್ನು ಯಾರಾದರೂ ಪ್ರೀತಿಸಿದರೆ ಅವನು ಧನ್ಯನಾಗುವನು. ಅವನಿಗೆ ದುಃಖ, ಕಷ್ಟ ಇರುವುದಿಲ್ಲ.

* *(ಒಬ್ಬಾಕೆ ಭಕ್ತೆ ಶ್ರೀರಾಮಕೃಷ್ಣರ ಪೂಜೆ ಮಾಡುವ ವಿಧಾನವನ್ನು ಕಲಿಯಬಯಸಿದ್ದಳು. ಅವಳಿಗೆ - )*

ನೋಡಮ್ಮಾ, ನೀವು ಸಂಸಾರದಲ್ಲಿ ಇದ್ದೀರಿ. ನಿಮಗೆ ಅನ್ನೆಲ್ಲ ಮಾಡಲಾಗದು. ನೀನು ಅವರ ನಾಮವನ್ನು ಪಡೆದಿದ್ದೀಯೆ. ನಿನಗೆ ಅವರ ನಾಮಜಪ ಮಾಡಲು ಎಷ್ಟು ಸಾಧ್ಯವಾಗುತ್ತದೋ ನೋಡುತ್ತೇನೆ. ಅವರ ನಾಮಜಪವನ್ನು ಸರಿಯಾಗಿ ಮಾಡಿದರೆ ಎಲ್ಲವೂ ಲಭಿಸುವುದು.

* ನೋಡು ಮಗೂ, ನಿನಗೇನೂ ವಿಪತ್ತು ಬರಲಾರದು ಎಂದೇನೂ ಇಲ್ಲ ; ಅದು ಬಂದೇ ಬರುವುದು. ಆದರೆ ಅದು ಹೆಚ್ಚು ಕಾಲ ಉಳಿಯಲಾರದು ; ಅದು ಕಾಲಿನ ಕೆಳಗೆ ಹರಿದು ಹೋಗುವ ನೀರಿನಂತೆ ಹೊರಟುಹೋಗುವುದು.

*('ಶ್ರೀಶಾರದಾದೇವಿ ವಚನವೇದ', ಪು. ೫೧೨-೧೫)*

ವಿದ್ಯಾರ್ಥಿ ಪುಟ

# ನೋಟ್ಸ್ ಮಾಡುವ ಬಗೆ

'ಜ್ಯೋತಿಷ್ಮತಿ'

ಆತ್ಮೀಯ ವಿದ್ಯಾರ್ಥಿಗಳೆ,

ಉತ್ತಮ ಅಧ್ಯಯನ ಮಾಡುವವರಿಗೆ ಗೊತ್ತಿರಬೇಕಾದ ಒಂದು ಉಪಯುಕ್ತ ಅಭ್ಯಾಸವೇ ನೋಟ್ಸ್ ಮಾಡಿಕೊಳ್ಳುವುದು. ಹಲವರಿಗೆ ಉದಾಸೀನ; ನೋಟ್ಸ್ ಮಾಡುವುದೆಂದರೆ ತಲೆನೋವು. ಇನ್ನು ಅನೇಕರಿಗೆ ನೋಟ್ಸ್ ಮಾಡಲು ಮನಸ್ಸಿದೆ, ಆದರೆ ಹೇಗೆ ಮಾಡುವುದು ಎಂದು ತಿಳಿಯದು. ಕೆಲವರು, 'ನೋಟ್ಸ್ ಮಾಡುವ ಅಗತ್ಯವೇನಿದೆ? ತಲೆಯಲ್ಲಿ ವಿಷಯ ಉಳಿದರೆ ಸಾಕಲ್ಲ?' ಎಂದು ಅಸಡ್ಡೆ ತೋರುತ್ತಾರೆ. ಆದರೆ ನೋಟ್ಸ್ ಮಾಡುವುದು ಎಷ್ಟೊಂದು ಮುಖ್ಯ ಎಂಬುದನ್ನು ಈಗ ನೋಡೋಣ.



### ೧. ನೋಟ್ಸ್ ಮಾಡುವುದು ಅತ್ಯಂತ ಮುಖ್ಯ

ಮನಸ್ಸಿಗೆ ಎರಡು ಶಕ್ತಿಗಳಿವೆ. ೧) ಗ್ರಹಿಸುವುದು ೨) ಪ್ರತಿಕ್ರಿಯಿಸುವುದು. ಮೊದಲನೆಯದು ತಟಸ್ಥ, ಎರಡನೆಯದು ಕ್ರಿಯಾಶೀಲ. ಪಾಠ ಕೇಳುವಾಗ ಮನಸ್ಸು ಗ್ರಹಿಸುತ್ತದೆ, ಆದರೆ ಅದು ತಟಸ್ಥವಾಗಿರುತ್ತದೆ. ಆದರೆ ಬರೆಯುವಾಗ, ಮಾತನಾಡುವಾಗ, ಚರ್ಚಿಸುವಾಗ ಗ್ರಹಿಸುವ, ಪ್ರತಿಕ್ರಿಯಿಸುವ – ಎರಡೂ ಬಗೆಯ ಕೆಲಸದಲ್ಲಿ ಮನಸ್ಸು ತೊಡಗುತ್ತದೆ. ಅಲ್ಲಿ ಮನಸ್ಸು ತಟಸ್ಥವಾಗಿರದು. ಅದು ಅಲ್ಲಿ ಕ್ರಿಯಾಶೀಲವಾಗಿರಲೇಬೇಕು.

ಈ ದೃಷ್ಟಿಯಿಂದ ನೋಡಿದಾಗ ನೋಟ್ಸ್ ಮಾಡುವುದು ಅತ್ಯಂತ ಮುಖ್ಯ. ಆದರೆ ಅಧ್ಯಾಪಕರು ಹೇಳಿದ್ದನ್ನೆಲ್ಲ ಬರೆಯುತ್ತ ಹೋಗಲು ಸಾಧ್ಯವಿಲ್ಲ; ಕಾರಣ ಬರವಣಿಗೆ ನಿಧಾನ, ಮಾತು ವೇಗವಾಗಿರುತ್ತದೆ. ಆದ್ದರಿಂದ ಮುಖ್ಯ ವಿಚಾರವನ್ನು ಮಾತ್ರ ಬರೆದು ನೋಟ್ಸ್ ಮಾಡಿಕೊಳ್ಳಬೇಕು. ಸಂಪೂರ್ಣ ವಾಕ್ಯರಚನೆ ಅನಗತ್ಯ ; ಮುಖ್ಯ ಅಂಶಗಳನ್ನು ಗುರುತು ಹಾಕಿಕೊಂಡರೂ ಸಾಕು. ನೋಟ್ಸ್ ಮಾಡುವ ಮೂಲಕ ಮನಸ್ಸು ಎಚ್ಚರದಿಂದ ಇರುವಂತೆ ನೋಡಿಕೊಳ್ಳಬಹುದು. ಇದು ಇನ್ನೊಂದು ಲಾಭ. ಮುಂದಿನ ಅಭ್ಯಾಸಕ್ಕೆ ನೋಟ್ಸ್ ಅತ್ಯಂತ ಉಪಯುಕ್ತವಾಗುತ್ತದೆ.

### ೨. ನೋಟ್ಸ್ ಮಾಡುವ ಕಲೆ

ನೋಟ್ಸ್ ಮಾಡುವುದು ಒಂದು ಕಷ್ಟಕರವಾದ ಕೆಲಸ ಎಂದು ಭಾವಿಸದೆ, ಅದನ್ನೊಂದು ಕಲೆಯಾಗಿ ಭಾವಿಸಿ. ಇದರಿಂದ ನಿಮಗರಿವಿಲ್ಲದೆಯೇ ಅದರಲ್ಲಿ ನೀವು ಪಳಗುತ್ತೀರಿ. ಯಾವುದೇ ನೋಟ್ಸ್ ಮಾಡಿದರೂ ಅದು ಮುಂದೆ ನಿಮಗೆ ಉಪಯೋಗವಾಗುವಂತಿರಬೇಕು. ಅಧ್ಯಾಪಕರು ಪಾಠ ಮಾಡುವಾಗ ನೀವು ಮಾಡಿಕೊಳ್ಳುವ ನೋಟ್ಸ್ ಆಗಿರಲಿ, ಪಠ್ಯಪುಸ್ತಕವನ್ನು ಓದುವಾಗ ನೀವೇ ಮಾಡಿಕೊಳ್ಳುವ ನೋಟ್ಸ್ ಆಗಿರಲಿ, ಅಥವಾ ಅಧ್ಯಾಪಕರೇ ಕೊಟ್ಟ ನೋಟ್ಸ್ ಆಗಿರಲಿ – ಅದು ನಿಮಗೆ ಅಂದವಾಗಿ ಕಾಣುವಂತೆ ಮಾಡಿಕೊಳ್ಳಿ. ವಿವಿಧ ಬಣ್ಣಗಳ ಪೆನ್, ಪೆನ್ಸಿಲ್‌ಗಳನ್ನು ಬಳಸಿ. ನೋಡಿದ್ದು ಹೆಚ್ಚು ನೆನಪಿನಲ್ಲಿ ಉಳಿಯುತ್ತದೆ. ಇದನ್ನು ಮರೆಯಬೇಡಿ.

### ೩. ನೋಟ್ಸ್ ಮಾಡಿದ್ದು ಸರಿಯಾಗಿದೆಯೆ?

ನೀವು ತಯಾರಿಸಿದ ನೋಟ್ಸ್ ನಿಮ್ಮ ಅಧ್ಯಯನದ ಕೈಗನ್ನಡಿ. ಆದರೆ ಅದು ಸರಿಯಾಗಿದೆಯೆ? ಏನಾದರೂ ಬಿಟ್ಟುಹೋಗಿದೆಯೆ? ತಪ್ಪುಗಳೇನಾದರೂ ಆಗಿದೆಯೆ? – ಇದನ್ನು ಹೇಗೆ ತಿಳಿಯುವಿರಿ?

ಪರೀಕ್ಷೆಯಲ್ಲಿ ನೀವು ಬರೆದ ಉತ್ತರ ಸರಿಯಾಗಿದ್ದರೆ, ನಿಮಗೆ ಪೂರ್ಣ ಅಂಕ ದೊರೆತಿದ್ದರೆ ನಿಮ್ಮ ನೋಟ್ಸ್ ಸರಿ ಎಂದೇ ಅರ್ಥ. ಉತ್ತರ ಪತ್ರಿಕೆ ದೊರೆತ ಬಳಿಕ (ಲಭ್ಯವಿದ್ದರೆ) ನಿಮ್ಮ ನೋಟ್ಸ್‌ನಲ್ಲಿರುವ ಅಂಶ ಅಲ್ಲಿ ಬಂದಿದೆಯೇ ಎಂದು ಗಮನಿಸಿ. ಇತರ ಸಹಪಾಠಿಗಳ ನೋಟ್ಸ್ ಜೊತೆಗೆ ನಿಮ್ಮ ನೋಟ್ಸ್ ಅನ್ನು ಹೋಲಿಸಿ ನೋಡಿ. ತಪ್ಪಿದ್ದರೆ ಸರಿ ಮಾಡಿಕೊಳ್ಳಿ. ಅಧ್ಯಾಪಕರಿಗೆ ನೋಟ್ಸ್‌ಗಳನ್ನು ಆಗಾಗ ತೋರಿಸಿ ಕೂಡ ಖಾತ್ರಿಪಡಿಸಿಕೊಳ್ಳಬಹುದು. ಈ ರೀತಿ ನಿಮ್ಮ ಅಧ್ಯಯನದಲ್ಲಿ ನೋಟ್ಸ್ ಉಪಯುಕ್ತವಾಗುವುದು. *

# ಅಂದು – ಇಂದು – ಮುಂದು

ಶಶಿಕಲಾ ಶ್ರೀಧರ್

ಭೌತಿಕ ಪ್ರಪಂಚದ ಮೂರ್ತ ವಿದ್ಯಮಾನಗಳಲ್ಲಿ ಒಂದಾದ ಕಾಲವು ಅತ್ಯಂತ ಅಗೋಚರ ಹಾಗೂ ಅನೂಹ್ಯ ಆಯಾಮವನ್ನೂ ಹೊಂದಿದೆ. ನಿತ್ಯ ಬದುಕಿನಲ್ಲೂ ತಾತ್ತ್ವಿಕ ಚಿಂತನೆಯಲ್ಲೂ ಕಾಲವನ್ನು ಕುರಿತ ಹಲವು ಚಿಂತನೆಗಳು ನಡೆದಿವೆ. ಬದುಕಿನಲ್ಲಿ ಈ ವಿಷಯವಾಗಿ ಹೆಚ್ಚು ಚಿಂತಿಸುವುದು ನಮ್ಮ ಬೌದ್ಧಿಕ ಉನ್ನತಿಗೆ ಅಗತ್ಯ. ಈ ಕುರಿತು ವಿವರಿಸಿರುವ ಲೇಖಕಿ, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಅವರು ಸಂಸ್ಕೃತ, ಸಂಗೀತ ಕ್ಷೇತ್ರಗಳಲ್ಲಿ ಪರಿಣತರು.

**ಕಾ**ಲ ಎಂದರೇನು? ಅದರಲ್ಲಿ ಅಂದು-ಇಂದು- ಮುಂದುಗಳೇನು? ನಮ್ಮ ಧರ್ಮಶಾಸ್ತ್ರಗಳಲ್ಲಾದರೋ ಈ ಕಾಲ ಎಂಬ ಶಬ್ದವು ಅನೇಕ ಅರ್ಥಗಳಲ್ಲಿ ಪ್ರಯೋಗಿಸಲ್ಪಡುತ್ತಿದೆ : ವೇಳೆ, ಸಮಯ, ಅವಕಾಶ, ಅವಧಿ, ಗಡುವು, ಜ್ಯೋತಿಶ್ಶಾಸ್ತ್ರದ ಒಂದು ಯೋಗ, ಮರಣ, ಯಮ, ಪರಮೇಶ್ವರ ಮುಂತಾದುವು.

ಕಾಲವು ನಮ್ಮ ಅಂತರಂಗದಲ್ಲಿ ಅನುಭವಿಸುವ ಒಂದು ಬಹಿರಂಗ ಸಂಗತಿ. ಅದು ನಮ್ಮ ಕಂಗಳಿಗೂ ಕರಗಳಿಗೂ ಸಿಗದೆ ಜ್ಞಾನಕ್ಕೆ ಮಾತ್ರ ವಿಷಯವಾಗುತ್ತದೆ. ಕಾಲಕ್ಕೆ ಸ್ವತಃ ರೂಪವಿಲ್ಲದ ಕಾರಣ, ರೂಪವಿರುವ ಭೌತಿಕ ವಿಷಯ, ವಸ್ತು ಮತ್ತು ಕ್ರಿಯೆಯ ಜೊತೆ ನಮ್ಮ ಮನಸ್ಸಿಗೆ ಗೋಚರಿಸುತ್ತದೆ. ನಿನ್ನೆ, ಇಂದು, ನಾಳೆ; ಅಂದು ಈಗ, ಆಗ, ಎಂದು ಇವೆಲ್ಲವೂ ಕಾಲ ವಾಚಕಗಳು. ಹೀಗೆ ಉಪಾಧಿಭೇದಗಳಿಂದ ಭೂತಕಾಲ, ವರ್ತಮಾನ ಕಾಲ ಹಾಗೂ ಭವಿಷ್ಯತ್ ಕಾಲ ಎಂದು ಕಾಲವಿಂಗಡನೆಯಾಗಿದೆ.

ಶ್ರೀ ಡಿ. ವಿ. ಗುಂಡಪ್ಪನವರು ಕಾಲದ ಬಗ್ಗೆ ಹೇಳುತ್ತಾ, ''ನಮ್ಮ ಜೀವಮಾನಕ್ಕೆ ಹಿಂದುಗಡೆ ಕಾಲವಿತ್ತು, ಮುಂದೆಯೂ ಇರುತ್ತದೆ. ಶಾಶ್ವತಕಾಲದ ಒಂದು ಚೂರು ನಮ್ಮ ಜೀವಮಾನ. ಆದ್ದರಿಂದ ಕಾಲವು ಅನಾದಿ ಮತ್ತು ಅನಂತ'' ಎಂಬ ಸುಂದರ ವಿವರಣೆಯನ್ನು ನೀಡಿದ್ದಾರೆ.

ಭರ್ತೃಹರಿಯು ತನ್ನ ವೈರಾಗ್ಯ ಶತಕದಲ್ಲಿ ಕಾಲದ ಬಗ್ಗೆ ಹೇಳುತ್ತಾ, ''ಜಗತ್ತೆಂಬುದು ಪಗಡೆಯ ಹಾಸಿನಂತೆ. ಅದರಲ್ಲಿನ ಪ್ರಾಣಿಗಳು ಪಗಡೆಯಾಟದ ಕಾಯಿಗಳು. ಕಾಯಿಗಳನ್ನು ನಡೆಸಲು ಗರ ಹಾಕುವ ದಾಳಗಳೇ ಹಗಲು-ರಾತ್ರಿಗಳು. ಈ ದಾಳಗಳನ್ನು ಎಸೆಯುವ ಪುರುಷನೇ ಕಾಲ. ಹೀಗೆ ಆಟದ ಸಂಯೋಗ-ವಿಯೋಗ, ವೃದ್ಧಿ-ಕ್ಷಯ ಎಲ್ಲಕ್ಕೂ ಕಾಲನೇ ಕಾರಣ'' ಎನ್ನುತ್ತಾನೆ.

ಈ ಕಾಲವನ್ನು ಅಳೆಯುವುದಾದರೂ ಹೇಗೆ?

ಕಣ್ಣುರೆಪ್ಪೆಗಳನ್ನು ಒಮ್ಮೆ ಮಿಟುಕಿಸಿದರೆ ಅದರ ಕಾಲಾವಧಿಯನ್ನು ನಿಮೇಷ ಎಂದು ಕರೆಯುತ್ತಾರೆ. ಇಂತಹ

| | | |
|---|---|---|
| ೧೮ ನಿಮೇಷಗಳು | = | ೧ ಕಾಷ್ಠಾ |
| ೩೦ ಕಾಷ್ಠಗಳು | = | ೧ ಕಲಾ |
| ೩೦ ಕಲೆಗಳು | = | ೧ ಕ್ಷಣ |
| ೧೨ ಕ್ಷಣಗಳು | = | ೧ ಮುಹೂರ್ತ |
| ೩೦ ಮುಹೂರ್ತಗಳು | = | ೧ ಅಹೋರಾತ್ರ (ಹಗಲು+ಇರುಳು) |
| ೩೦ ಅಹೋರಾತ್ರಗಳು | = | ೧ ಮಾಸ (ತಿಂಗಳು) |
| ೧೨ ಮಾಸಗಳು | = | ೧ ಸಂವತ್ಸರ |

ಇಂತಹ ಕಾಲಗಣನೆಯಲ್ಲಿ ನಾವು ಎಷ್ಟೋ ಸಂವತ್ಸರಗಳನ್ನು ಕಳೆದುಬಿಟ್ಟಿದ್ದೇವೆ. ಅದರಲ್ಲಿ ಎಷ್ಟು ಸಂವತ್ಸರಗಳು ಸಾರ್ಥಕವಾಗಿ ಕಳೆಯಲ್ಪಟ್ಟಿವೆಯೋ ಆ ದೇವನೇ ಬಲ್ಲ. ಭರ್ತೃಹರಿಯು ಪುನಃ ಹೇಳುವಂತೆ ಸೂರ್ಯನ ಉದಯಾಸ್ತಗಳಿಂದ ಆಯುಸ್ಸು ಕ್ಷೀಣವಾಗಿ ಹೋಗುತ್ತಿರುತ್ತದೆ. ಉದ್ಯೋಗಾದಿ ಕಾರ್ಯಭಾರಗಳಿಂದ ದಿನಗಳುರುಳುವುದು ತಿಳಿಯುವುದೇ ಇಲ್ಲ. ಎಲ್ಲೆಡೆ ಹುಟ್ಟು-ಸಾವು-ಮುಪ್ಪು-ವಿಪತ್ತುಗಳನ್ನು ನೋಡುತ್ತಿದ್ದರೂ ಭೀತಿಯುಂಟಾಗುತ್ತಿಲ್ಲ. ವಿವೇಕ ಶೂನ್ಯವಾಗಿ ಉನ್ಮತ್ತರಾಗಿ ವರ್ತಿಸುತ್ತಿದ್ದೇವೆ.

ಇದನ್ನೇ ಶ್ರೀಶಂಕರಭಗವತ್ಪಾದರು,

ಪುನರಪಿ ಜನನಂ ಪುನರಪಿ ಮರಣಂ
ಪುನರಪಿ ಜನನೀಜಠರೇ ಶಯನಂ
ಇಹ ಸಂಸಾರೇ ಬಹುದುಸ್ತಾರೇ
ಕೃಪಯಾಽಪಾರೇ ಪಾಹಿ ಮುರಾರೇ

ಎಂದು ಗೋವಿಂದನನ್ನು ಸ್ತುತಿಸುತ್ತಾರೆ.

ಪುನಃ ಶ್ರೀಶಂಕರರು,

ದಿನಯಾಮಿನ್ಯೌ ಸಾಯಂ ಪ್ರಾತಃ
ಶಿಶಿರವಸಂತೌ ಪುನರಾಯಾತಃ
ಕಾಲಃ ಕ್ರೀಡತಿ ಗಚ್ಛತ್ಯಾಯುಃ
ತದಪಿ ನ ಮುಂಚತ್ಯಾಶಾವಾಯುಃ ॥

ಎಂದರೆ, ಹಗಲು ಇರುಳು ಸಂಜೆ ಮುಂಜಾನೆ ಶಿಶಿರಋತು ವಸಂತಋತು ಮರಳಿ ಮರಳಿ ಬಂದು ಹೋಗುತ್ತಿವೆ. ಕಾಲವು